ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 68 ಬಿಎಲ್‌ಡಿ 2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 25-07-2015.

**ಸುತ್ತೋಲೆ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಪಾಲಿಟೆಕ್ನಿಕ್‌ಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ತುರ್ತು ಸಮಯದಲ್ಲಿ ಉಪಯೋಗಿಸಲು ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸುವ ಕುರಿತು

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 318 ಟಿಪಿಇ 2014, ದಿನಾಂಕ 29-11-2014(ಪ್ರತಿ ಲಗತ್ತಿಸಿದೆ).

1. ಮೆ:ಕೃಷ್ಣ ಎಂಟರ್‌ಪ್ರೈಸಸ್, ಗಾಂಧಿನಗರ, ಬೆಂಗಳೂರು ಇವರ ಪತ್ರ ಸಂಖ್ಯೆ:234/ಪ್ರಕಾಶಾಶಿ/ಅಉದ/2014-15 ದಿನಾಂಕ:18-11-2014(ಪ್ರತಿ ಲಗತ್ತಿಸಿದೆ)

***

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ (1)ರ ಪತ್ರದಲ್ಲಿ ಸರ್ಕಾರವು ಮೆ:ಕೃಷ್ಣ ಎಂಟರ್‌ಪ್ರೈಸಸ್, ಬೆಂಗಳೂರು ಇವರು ಸಲ್ಲಿಸಿರುವ ಮನವಿ ಮತ್ತು ಅಡಕಗಳ ಪ್ರತಿಯನ್ನು ಲಗತ್ತಿಸಿ ಸದರಿ ಮನವಿಯಲ್ಲಿ ಕೋರಿರುವ ಅಂಶದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮಕ್ಕೆಗೊಳ್ಳುವಂತೆ ಕೋರಿರುತ್ತಾರೆ.

ಮೆ.ಕೃಷ್ಣ ಎಂಟರ್‌ಪ್ರೈಸಸ್ ಇವರು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಹಲವಾರು ಸರ್ಕಾರಿ ಕಛೇರಿಗಳಲ್ಲಿ ಅಗ್ನಿ ಅನಾಹುತಗಳು ಸಂಭವಿಸಿ ಕಡತಗಳು, ಉಪಕರಣಗಳು, ಪೀಠೋಪಕರಣಗಳು ನಾಶವಾಗಿರುವ ಮಾಧ್ಯಮಗಳ ವರದಿಯ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯ ಕ್ರಮವಾಗಿ ಅಗ್ನಿ ಶಾಮಕ ಉಪಕರಣಗಳನ್ನು ಸರ್ಕಾರಿ ಮಹಾವಿದ್ಯಾಲಯ/ಕಾಲೇಜುಗಳಲ್ಲಿ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್ ವಿದ್ಯಾಲಯಗಳ ಕಟ್ಟಡಗಳ ಆವರಣಗಳ ಸೂಕ್ತ ಸ್ಥಳಗಳಲ್ಲಿ ಅಳವಡಿಸಿದ್ದಲ್ಲಿ ಮುಂದೆ ಸಂಭವಿಸಬಹುದಾದ ಅಗ್ನಿ ಅನಾಹುತಗಳನ್ನು ತಡೆಗಟ್ಟಬಹುದಾದ್ದರಿಂದ ತಾವು ಆದೇಶಿಸಿದ್ದಲ್ಲಿ ಅವಶ್ಯಕ ಪ್ರಮಾಣದ ಅಗ್ನಿ ಶಾಮಕ ಉಪಕರಣಗಳನ್ನು ಅಳವಡಿಸಿ ಲಭ್ಯವಿರುವ ಅಲ್ಲಿಯ ಸಿಬ್ಬಂದಿಗಳಿಗೆ ತುರ್ತು ಸಮಯದಲ್ಲಿ ಅಗ್ನಿ ಶಾಮಕ ಉಪಕರಣಗಳನ್ನು ಉಪಯೋಗಿಸುವ ಬಗ್ಗೆ ಮಾಹಿತಿ ಹಾಗೂ ತರಬೇತಿಯನ್ನು ಸಹ ನೀಡಲಾಗುವುದು

ಅಳವಡಿಸಲಿರುವ ಅಗ್ನಿ ಶಾಮಕ ಉಪಕರಣಗಳ ವಿವರಗಳು

| ಕ್ರ.ಸಂ | ವಿಷಯಸೂಚಿ | ಪ್ರಮಾಣ | ದರ |
|---|---|---|---|
| 1 | ಮೆಕಾನಿಕಲ್ ಫೋಂ ಮಾದರಿಯ 9 ಲೀಟರ್ ಸಾಮರ್ಥ್ಯವುಳ್ಳ ಹಾಗೂ ಐಎಸ್‌ಐ ಚಿಹ್ನೆವುಳ್ಳ (ಕಾಗದ, ಪೀಠೋಪಕರಣ, ಬಟ್ಟೆ ಹಾಗೂ ದ್ರವ ಪದಾರ್ಥಗಳಿಂದ ಉಂಟಾಗಬಹುದಾದ) ಸಾಮಾನ್ಯ ಬೆಂಕಿಯನ್ನು ನಂದಿಸುವ ಅಗ್ನಿಶಾಮಕ ಉಪಕರಣ | 1 ಕ್ಕೆ | 5280.00 |
| 2 | ಎಬಿಸಿ ದರ್ಜೆಯ ಕೆಮಿಕಲ್ ಪೌಡರ್ ಮಾದರಿಯ 4.ಕೆ.ಜಿ ಸಾಮರ್ಥ್ಯವುಳ್ಳ ಹಾಗೂ ಐಎಸ್‌ಐ ಚಿಹ್ನೆವುಳ್ಳ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅಥವಾ ಅನಿಲ ದುರಂತಗಳಿಂದ ಉಂಟಾಗಬಹುದಾದ ಅಗ್ನಿ ದುರಂತವನ್ನು ನಂದಿಸುವ ಅಗ್ನಿಶಾಮಕ ಉಪಕರಣ | 1ಕ್ಕೆ | 5362.00 |

ಮೇಲೆ ನಮೂದಿಸಿರುವ ದರಗಳು ಕರ್ನಾಟಕ ಸರ್ಕಾರದ ಅನುಮೋದಿತ ಎಸ್.ಆರ್.ದರಪಟ್ಟಿಯ ದರ 2014-15 ರಂತೆ ಸರಬರಾಜು ಮಾಡಿ ಅಳವಡಿಸಲಾಗುವುದು. ಸದರಿ ಸಂಸ್ಥೆಯು ಲೋಕೋಪಯೋಗಿ ಇಲಾಖೆಯ 2014-15 ನೇ ಸಾಲಿನ ದರಪಟ್ಟಿಯನ್ನು ಲಗತ್ತಿಸಿರುತ್ತಾರೆ.

ಈ ದಿಸೆಯಲ್ಲಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಹಲವಾರು ಶಾಲಾ ಕಾಲೇಜುಗಳಲ್ಲಿ ಅಗ್ನಿ ಅನಾಹುತಗಳು ಸಂಭವಿಸಿ ಕಡತಗಳು, ಉಪಕರಣಗಳು, ಪೀಠೋಪಕರಣಗಳು ನಾಶವಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ಆಗ್ಗಿಂದಾಗೆ ವರದಿಯಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಲಯವು ಶಾಲಾ ಕಾಲೇಜುಗಳಲ್ಲಿ ಅಗ್ನಿ ಶಾಮಕ ಉಪಕರಣಗಳ ಅಳವಡಿಕೆ ಕಡ್ಡಾಯಗೊಳಿಸಿರುವ ಆದೇಶವನ್ನು ಪಾಲಿಸಬೇಕಾಗಿರುವುದರ ಹಿನ್ನಲೆಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಗಳಲ್ಲಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಟ್ಟಡದ ಆವರಣಗಳ ಸೂಕ್ತ ಸ್ಥಳಗಳಲ್ಲಿ ಅವಶ್ಯಕ ಪ್ರಮಾಣದ ಅಗ್ನಿ ಶಾಮಕ ಉಪಕರಣಗಳನ್ನು ಅಳವಡಿಸಿಕೊಳ್ಳುವಂತೆ ಹಾಗು ಈ ಸಂಬಂದದ ವೆಚ್ಚವನ್ನು ಎನ್.ಎಸ್.ಎಸ್. ಫಂಡ್, ರೀಡಿಂಗ್ ರೂಂ ಫಂಡ್, ಸ್ಪೋರ್ಟ್ಸ್ ಫಂಡ್, ಅಲ್ಯೂಮಿನಿಯ ಅಸೋಷಿಯೇಷನ್ ಇದರಲ್ಲಿ ಭರಿಸುವಂತೆ ಸೂಚಿಸಿದೆ. ಈ ಬಗ್ಗೆ ಉದಾಸೀನತೆ ತೋರಿದಲ್ಲಿ ಮುಂದೆ ಸಂಭವಿಸಬಹುದಾದ ಆಕಸ್ಮಿಕ ಅವಗಡಗಳಿಗೆ ಸಂಬಂದಿಸಿದ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಹ ತಿಳಿಸಲಾಗಿದೆ.

ನಿರ್ದೇಶಕರು

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001.

ಇವರಿಗೆ:

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರಿಗೆ ಅಗತ್ಯ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಶ್ರೀ.ಕೃಷ್ಣ ಎಂಟರ್‌ಪ್ರೈಸಸ್, ನಂ.20/29, ನೆಲ ಅಂತಸ್ತು, ಅಮರ ಟವರ್ಸ್, 1ನೇ ಕ್ರಾಸ್, ಗಾಂಧಿನಗರ, ಬೆಂಗಳೂರು – 560 009 ಮಾಹಿತಿಗಾಗಿ.